**O.S. 115-15 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 19.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ M V S ವಕೀಲರಿಂದಃ**

19. ಖುರ್ಷಿದ್ ಆಲಂ ಎಂಬ ವ್ಯಕ್ತಿ ಹೊಲದ ಮಾಲಿಕರ ವಿರುದ್ಧ ಕೇಸ್ ಹಾಕಿದ್ದರಿಂದ ಹೆಸರು ಬದಲಾವಣೆ ಮಾಡಲು ಅರ್ಜಿ ಕೊಟ್ಟಿಲ್ಲ. ಸದರಿ ಕೇಸ ವಜಾಗೊಂಡ ನಂತರ ನಾವು ಅರ್ಜಿ ಕೊಟ್ಟು ನಮ್ಮ ಹೆಸರಿನಲ್ಲಿ ದಾಖಲೆ ಮಾಡಿಕೊಂಡಿದ್ದೇವೆ. ಖುರ್ಷಿದ್ ಆಲಂ ರವರು 2010-11 ರಲ್ಲಿ ದಾವೆ ಸಲ್ಲಿಸಿದ್ದನು. ಖರೀದಿ ದಿನ ನೋಂದಣಿ ಆದ ನಂತರ ಖುರ್ಷಿದ್ ಆಲಂ ರವರು ತಡೆಯಾಜ್ಞೆ ಹೊಲದ ಮಾಲಿಕರ ಮೇಲೆ ತಂದಿದ್ದನು. 2015 ರಲ್ಲಿ ಖುರ್ಷಿದ್ ಆಲಂ ರವರು ಸಲ್ಲಿಸಿದ ದಾವೆ ವಜಾಗೊಂಡಿದೆ. 2024 ರಲ್ಲಿ ಹೆಸರು ದಾಖಲ್ ಮಾಡಲು ಅರ್ಜಿ ಕೊಟ್ಟಿದ್ದೆವು ಅಂದರೆ ಸರಿ. ಪ್ರತಿವಾದಿಗಳಿಗೆ ಖರೀದಿ ವಿಷಯ ಗೊತ್ತಾಗುತ್ತದೆ ಅಂತಾ ನಾವು ಅರ್ಜಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಶ್ರೀಮತಿ ಲಕ್ಷ್ಮೀ ಶ್ರೀಶೈಲ್ ಗೌಡ ಪಾಟೀಲ, ಶ್ರೀಮತಿ ಸಾವಿತ್ರಿ ಕೋಂ. ಶಂಕರ ಕಲಂಬಾವಿ, ಶ್ರೀಮತಿ ಶೋಭಾ ಗದಿಗೆಪ್ಪ ಮೇಟಿ ರವರನ್ನು ಪ್ರತಿವಾದಿಗಳೇ ಹೆಸರು ಕೊಟ್ಟು ಮುಂದೆ ತೊಂದರೆ ಆಗಬಾರದು ಎಂದು ಚೆಕ್ ಮೂಲಕ ಹಣ ಕೊಟ್ಟು ಖರೀದಿ ಪತ್ರ ಬರೆಸಿಕೊಟ್ಟಿದ್ದಾರೆ. ಖರೀದಿ ಪತ್ರವಾದ ದಿನ ಪ್ರತಿವಾದಿ ನಂಃ 1 ಹಾಗೂ 2 ರವರು ದಾವಾ ಆಸ್ತಿ ಮಾಲಿಕರು ಅಂದರೆ ಸರಿ. ನಾವು 2024 ರವರೆಗೆ ನಮ್ಮ ಹೆಸರು ಬದಲಾವಣೆಯಾಗುವವರೆಗೂ ಅವರೆ ಮಾಲಿಕರು ಅಂದರೆ ಸರಿಯಲ್ಲ. ಶ್ರೀಮತಿ ಶಾಂತವ್ವ ಬಸನಗೌಡ ಹಳ್ಳದ, ಹನಮಂತಗೌಡ ಬಸನಗೌಡ ಹಳ್ಳದ, ಶ್ರೀಮತಿ ರುದ್ರವ್ವ ಶಿವಾನಂದ ಹೂಗಾರ, ಮಂಜುನಾಥ ತಂದೆಃ ಬಸನಗೌಡ ಹಳ್ಳದ ರವರುಗಳಿಗೆ ಪ್ರತಿವಾದಿ 1 ಹಾಗೂ 2 ರವರು ಮುಂದೆ ತೊಂದರೆಯಾಗಬಾರದೆಂದು ಚೆಕ್ ಮೂಲಕ ಹಣ ಕೊಡಿಸಿದ್ದಾರೆ. ಇವರುಗಳಿಗೆ ದಾವಾ ಆಸ್ತಿಯಲ್ಲಿ ಏನು ಹಕ್ಕು ಇದೆ ಎಂದು ಗೊತ್ತಿಲ್ಲ. ಶ್ರೀಮತಿ ಲಕ್ಷ್ಮೀ ಶ್ರೀಶೈಲ್‌ಗೌಡ ಪಾಟೀಲ, ಶ್ರೀಮತಿ ಸಾವಿತ್ರಿ ಕೋಂ. ಶಂಕರ ಕಲಂಬಾವಿ, ಶ್ರೀಮತಿ ಶೋಭಾ ಗದಿಗೆಪ್ಪ ಮೇಟಿ ರವರುಗಳಿಗೆ ದಾವಾ ಆಸ್ತಿಯಲ್ಲಿ ಏನು ಹಕ್ಕು ಇದೆ ಎಂದು ಗೊತ್ತಿಲ್ಲ. ಆಸ್ತಿ ಮಾಲಿಕರು ಅಲ್ಲದವರಿಗೆ ಹಣ ಕೊಟ್ಟು ಸುಳ್ಳು ಖರೀದಿ ಪತ್ರ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಪ್ರತಿವಾದಿ 1 ಹಾಗೂ 2 ರವರು ಮಾಲಿಕರು, ಬೇರೆಯವರು ಮಾಲಿಕರು ಅಲ್ಲ ಅಂದರೆ ಸರಿಯಲ್ಲ.

**O.S. 115-15 DW-1**

20. 2010 ರಲ್ಲಿ ಚೆಕ್ ಕೊಟ್ಟಾಗ ಖಾತೆಯಲ್ಲಿ ಹಣ ಇರಲಿಲ್ಲ ಅಂದರೆ ಸರಿಯಲ್ಲ. ಖಾತೆಯಲ್ಲಿ ಹಣವಿಲ್ಲದ ಕಾರಣ ಚೆಕ್ ಗಳು ಅಮಾನ್ಯಗೊಂಡಿವೆ ಅಂದರೆ ಸರಿಯಲ್ಲ. ನಿಜವಾಗಿಯೂ ಖಾತೆಯಲ್ಲಿ ಹಣ ಇದ್ದಿದ್ದರೆ ಡಿ ಡಿ ಕೊಡುತ್ತಿದ್ದೆವು, ಚೆಕ್ ಕೊಡುತ್ತಿರಲಿಲ್ಲ ಅಂದರೆ ಸರಿಯಲ್ಲ. ನಾನು, ಖುರ್ಷಿದ್ ಅಹ್ಮದ ಕಲಘಟಗಿ ಹಾಗೂ ಗಜಾನನ ಅಣ್ವೇಕರ ರವರು ಸೇರಿ ಪ್ರತಿವಾದಿ 1 ಹಾಗೂ 2 ರವರಿಗೆ ಹಣ ಕೊಡದೆ ಸುಳ್ಳು ಖರೀದಿ ಪತ್ರ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ಗಜಾನನ ಅಣ್ವೇಕರ ರವರು ಪ್ರತಿವಾದಿ ಪರವಾಗಿ ಸಾಕ್ಷಿಗೆ ಬಂದಿರುತ್ತಾರೆ. ರಾಜು ರಾಯಭಾಗಿ ನನಗೆ ಗೊತ್ತಿಲ್ಲ. ನಮ್ಮ ಪರವಾಗಿ ಖರೀದಿ ಪತ್ರದಲ್ಲಿ ಯಾರು ಸಾಕ್ಷಿದಾರರು ಇಲ್ಲ ಅಂದರೆ ಗೊತ್ತಿಲ್ಲ. ಪ್ರಶಾಂತ ಶೇಠ ನನಗೆ ಗೊತ್ತಿಲ್ಲ. ಖರೀದಿ ಪತ್ರವಾದಾಗಿನಿಂದ ದಾವಾ ಆಸ್ತಿ ಪ್ರತಿವಾದಿ 1 ಹಾಗೂ 2 ರವರ ಸ್ವಾಧೀನದಲ್ಲಿ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳ ಮನೆ ಇದೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.